## ಮುನ್ನೋಟ

### ಮೇ 25, ಶನಿವಾರ

**ಶಾಸ್ತ್ರೀಯ ಸಂಗೀತ ಮತ್ತು ಸಂವಾದ**

**ಯುವ** ಕಲಾವಿದ ವಿದ್ವಾನ್ ಗಿರಿಧರ ಉಡುಪ ಅವರ ಉಡುಪ ಫೌಂಡೇಶನ್ ವತಿಯಿಂದ, ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವೇದಿಕೆಯಲ್ಲಿ ಮೇ 25ರಂದು ಬೆಳಿಗ್ಗೆ 10.45ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿದ್ವಾನ್ ಎಚ್.ಕೆ.ನರಸಿಂಹಮೂರ್ತಿ ಅವರು ವಯೊಲಿನ್, ಚಂದನ್ ಕುಮಾರ್ ಕೊಳಲು, ತುಮಕೂರು ಬಿ. ವಿಶಂಕರ್ ಮೃದಂಗ ಹಾಗೂ ಗಿರಿಧರ ಉಡುಪ ಘಟಂ ವಾದ್ಯಗಳನ್ನು ನುಡಿಸಲಿದ್ದಾರೆ.


ಚಂದನ್ ಕುಮಾರ್


ಗಿರಿಧರ ಉಡುಪ



## ಕುಂಭಾಭಿಷೇಕ ಮಹೋತ್ಸವ

ವಿಜಯನಗರ 1ನೇ ಹಂತದಲ್ಲಿರುವ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಮೇ 25ರಿಂದ ಮೇ 27ರ ವರೆಗೆ ಯೋಗಾನರಸಿಂಹಸ್ವಾಮಿ ಹಾಗೂ ಶ್ರೀವಾರಿಯವರ ಕುಂಭಾಭಿಷೇಕ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಶನಿವಾರ (ಮೇ 25) ಬೆಳಿಗ್ಗೆ 9ಕ್ಕೆ ಯೋಗಾನರಸಿಂಹಸ್ವಾಮಿ ಹಾಗೂ ಶ್ರೀವಾರಿಯವರಿಗೆ ಅಭಿಷೇಕ ಮತ್ತು ಲಕ್ಷಾರ್ಚನೆ ನಂತರ ಲಲಿತಾ ಸಹಸ್ರನಾಮ ಪಾರಾಯಣ, ಭಾನುವಾರ (ಮೇ 26) ಸಹಸ್ರ ಕಳಸಾಭಿಷೇಕ, ಸೋಮವಾರ (ಮೇ 27) ಅಖಂಡ ಮಹಾಸುದರ್ಶನ ಹೋಮ ಹಾಗೂ ಮಹಿಳಾ ಸಂಘದಿಂದ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಲಿದೆ.

**ಉಪನ್ಯಾಸ**

ನಗರದ ಯಾದವಗಿರಿಯಲ್ಲಿರುವ ರಾಮಕೃಷ್ಣ ಆಶ್ರಮದದಲ್ಲಿ ಮೇ 25ರಂದು 'ಸ್ವಾಮಿ ವಿವೇಕಾನಂದರು ತಮ್ಮ ಸಹೋದರ ಸನ್ಯಾಸಿಗಳಿಗೆ ಬರೆದ ಪತ್ರ' ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿದೆ.

ಆಶ್ರಮದ ಅವರಣದಲ್ಲಿ ಸಂಜೆ 6ಕ್ಕೆ ಸ್ವಾಮಿ ವಿಪ್ರಾನಂದ ಉಪನ್ಯಾಸ ನೀಡುವರು.

**ಕಥೆ ಕೇಳೋಣ ಬನ್ನಿ**

ಕಲಾಸುರುಚಿ ಸಂಸ್ಥೆಯು ಮೇ 25ರಂದು ಸಂಜೆ 4.30ಕ್ಕೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಏರ್ಪಡಿಸಿದೆ.

ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗಮನೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮೈಸೂರು ಮಹಿಳಾ ವೇದಿಕೆ ಕಾರ್ಯದರ್ಶಿ ಪದ್ಮಾ ಪಾಂಡುರಂಗ ಕಥೆ ಹೇಳುವರು.

ಮಾಹಿತಿಗೆ ಮೊ.9972829130 ಸಂಪರ್ಕಿಸಬಹುದು.

### ಮೇ 26, ಭಾನುವಾರ

**'ಕಲಿಯುಗ ವ್ಯಾಸ ಶ್ರೀಮಹೇಂದ್ರನಾಥ ಗುಪ್ತ**

ನಗರದ ಯಾದವಗಿರಿಯಲ್ಲಿರುವ ರಾಮಕೃಷ್ಣ ಆಶ್ರಮದದಲ್ಲಿ ಮೇ 26ರಂದು 'ಕಲಿಯುಗ ವ್ಯಾಸ ಶ್ರೀಮಹೇಂದ್ರನಾಥ ಗುಪ್ತ' ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿದೆ.

ಸಂಜೆ 6ಕ್ಕೆ ಸ್ವಾಮಿ ಶಾಂತಿ ವ್ರತಾನಂದ ಅವರು ಉಪನ್ಯಾಸ ನೀಡುವರು.

**ಸಾಹಿತ್ಯ ಚಾವಡಿ ಸಂವಾದ**

ಕಲಾಸುರುಚಿ ಸಂಸ್ಥೆಯು ಮೇ 26ರಂದು ಬೆಳಿಗ್ಗೆ 10.30ಕ್ಕೆ ಸಾಹಿತ್ಯ ಚಾವಡಿ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿದೆ.

ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗಮನೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮಹಾರಾಜ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ಕೆ.ತಿಮ್ಮಯ್ಯ ಅವರು ಸಂವಾದ ನಡೆಸಲಿದ್ದಾರೆ.

ಮಾಹಿತಿಗೆ ಮೊ. 9481437600 ಸಂಪರ್ಕಿಸಬಹುದು.

### ಮೇ 28, ಮಂಗಳವಾರ

**'ಗೋಂಡ್ ಚಿತ್ರಕಲೆ' ತರಬೇತಿ**

ನಗರದ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯವು ಶೈಕ್ಷಣಿಕ ಕಾರ್ಯಕ್ರಮವಾದ 'ಮಾಡು ಮತ್ತು ಕಲಿ' ಸರಣಿಯ ಅಂಗವಾಗಿ ಮೇ 28 ರಿಂದ ಜೂನ್ 2ರ ರವರೆಗೆ ಮಧ್ಯಪ್ರದೇಶದ ಆದಿವಾಸಿಗಳ 'ಗೊಂಡ್ ಚಿತ್ರಕಲೆ' ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಆಸಕ್ತರು ₹ 260 ಶುಲ್ಕದೊಂದಿಗೆ ಹೆಸರು ನೋಂದಣಿ ಮಾಡಿಕೊಳ್ಳಬಹುದು. ದೂ: 0821-2448231 ಸಂಪರ್ಕಿಸಬಹುದು.



## ರಜತ ಮಹೋತ್ಸವ ಸಂಭ್ರಮ

ಸರಸ್ವತಿಪುರಂನಲ್ಲಿರುವ ಶ್ರೀಕೃಷ್ಣಧಾಮವು 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೇ 25ರಿಂದ ಜೂನ್ 1ರವರೆಗೆ ಶ್ರೀಕೃಷ್ಣಧಾಮ ಆವರಣದಲ್ಲಿ ರಜತ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೇ 25ರಂದು ಸಂಜೆ 6ಕ್ಕೆ ಪೇಜಾವರ ಮಠದ ವಿಶ್ವೇಶ ತೀರ್ಥ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿ ಸಲಿದ್ದು, ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಜಿ.ಹೇಮಂತ್ ಕುಮಾರ್ ಭಾಗವಹಿಸುವರು. ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೂ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಉಪನ್ಯಾಸ ಕಾರ್ಯಕ್ರಮಗಳು ಜರುಗಲಿವೆ.

ಮೇ 26ರಂದು ಬೆಳಿಗ್ಗೆ 9.30ಕ್ಕೆ 'ಧರ್ಮಕರ್ಮಗಳ ಮರ್ಮ' ಕುರಿತು ವಿಚಾರಗೋಷ್ಠಿ ನಡೆಯಲಿದ್ದು, ವಿದ್ವಾನ್ ಬೆ.ನಾ.ವಿಜಯೀಂದ್ರಾಚಾರ್ಯ, ಪ್ರೊ.ಸಿ.ಎಚ್.ಶ್ರೀನಿವಾಸ ಮೂರ್ತಿ, ಪ್ರೊ.ಕೆ.ಎಸ್.ಸುಮನಾಚಾರ್ಯ, ಪ್ರೊ. ಕೆ.ಎಸ್.ಸುನೀಲಾಚಾರ್ಯ ಭಾಗವಹಿಸುವರು. ಬೆಳಿಗ್ಗೆ 11ಕ್ಕೆ ನಡೆಯುವ 'ಶ್ರೀಕೃಷ್ಣನ ನಿರ್ದೋಷಿತ್ವ' ಕುರಿತ ವಿಚಾರಗೋಷ್ಠಿಯಲ್ಲಿ ಪ್ರೊ.ಎಂ.ಆರ್. ಆನಂದತೀರ್ಥಾಚಾರ್ಯ ಮಾಳಗಿ ಮತ್ತು ವಿದ್ವಾನ್ ಗುರು ಪವನಾಚಾರ್ಯ ಭಾಗವಹಿಸುವರು. ಸಂಜೆ 5.30ಕ್ಕೆ ಎಚ್.ವಿ.ನಾಗರಾಜ್ ರಾವ್ ಅವರನ್ನು ಸನ್ಮಾನಿಸಲಾಗುವುದು.

ಮೇ 28ರಂದು ಬೆಳಿಗ್ಗೆ 9.30ಕ್ಕೆ ಮಹಿಳಾ ಗೋಷ್ಠಿ ನಡೆಯಲಿದ್ದು, ಪ್ರೊ. ಜ್ಯೋತಿ ಶಂಕರ್, ಡಾ.ಜಯಶ್ರೀ ಚಂದ್ರಶೇಖರ, ವಿಜಯಾ ರಘುನಾಥ್,



ಲೇಖಕಿ ಟಿ.ಎನ್.ನಾಗರತ್ನಾ ಉಪನ್ಯಾಸ ನೀಡುವರು. ಸಂಜೆ 6.30ಕ್ಕೆ ಪ್ರಹ್ಲಾದ ಆಚಾರ್ಯರಿಂದ ಯಕ್ಷಿಣಿ ಮತ್ತು ನೆರಳಿನ ಆಟ ಪ್ರದರ್ಶನ ಆಯೋಜಿಸಲಾಗಿದೆ. ಮೇ 29ರಂದು ವಸಂತೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೇ 31ರಂದು ಸಂಜೆ 5.30ಕ್ಕೂ ಸಾಹಿತಿ ಎಸ್.ಎಲ್. ಭೈರಪ್ಪ ಅವರಿಗೆ 'ಕೃಷ್ಣಾನುಗ್ರಹ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹ 25 ಸಾವಿರ ನಗದು ಮತ್ತು ಪ್ರಮಾಣಪತ್ರ ಒಳಗೊಂಡಿದೆ. ಸಂಜೆ 7ಕ್ಕೆ ಕದ್ರಿಯ ಮಹಿಳಾ ಯಕ್ಷಕೂಟದಿಂದ ಯಕ್ಷಗಾನ ನಡೆಯಲಿದೆ. ಜೂನ್ 1ರಂದು ಉತ್ಸವದ ಸಮಾರೋಪ ನಡೆಯಲಿದ್ದು, ಸಚಿವ ಜಿ.ಟಿ. ದೇವೇಗೌಡ, ಸಂಸದ ಪ್ರತಾಪಸಿಂಹ, ಮೇಯರ್ ಪುಷ್ಪಲತಾ ಜಗನ್ನಾಥ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಭಾಗವಹಿಸುವರು.

## ಮರಗಳು ತೋರುವ ಅಮರಭಾವ

**ಡಾ.ಕೆ.ಎಸ್.ಕಣ್ಣನ್**

ಮರದ ಬುಡ ಮೊದಲು ಗಟ್ಟಿಯಾದಲ್ಲಿ ಮರವು ಸ್ಥಿರವಾಗಿರಬಲ್ಲುದು, ಚೆನ್ನಾಗಿ ಬೆಳೆಯಬಲ್ಲುದು. ಸೊಂಪಾಗಿ ವಿಸ್ತರಿಸಬಲ್ಲುದು. ಮುಂದೆ ಚೆನ್ನಾಗಿ ಬೆಳೆಯಲು ಬೇಕಾಗುವ ವ್ಯವಸ್ಥೆಯೆಲ್ಲಾ ಬೇರಿನ ಬೆಳವಣಿಗೆಯಲ್ಲೇ ನಿಗೂಢವಾಗಿ ಸಿದ್ಧವಾಗುತ್ತಿರುತ್ತದೆ – ಎಂದೆವಲ್ಲವೇ?

ಗಿಡವೇನು, ಮನುಷ್ಯ ಸೃಷ್ಟಿಯೂ ಹೀಗೆಯೇ, ಅಲ್ಲವೆ? ಇದನ್ನು ಗರ್ಭಶಾಸ್ತ್ರವು (ಎಂಬ್ರಿಯಾಲಜಿ embryology) ಸ್ಪಷ್ಟಪಡಿಸುತ್ತದೆ. ಮುಂದೆ ನೆರವೇರಬೇಕಾದ ಬೆಳವಣಿಗೆಗಾಗಿ ಎಲ್ಲ ಏರ್ಪಾಡೂ ಗರ್ಭದಲ್ಲಿಯೇ ಆಗಿರುತ್ತದೆ. ಸ್ತ್ರೀಯ ಗರ್ಭವನ್ನು ಸೇರಿದ ಪುರುಷನ ವೀರ್ಯವು ತಾಳುವ ಮೊದಲ ಆಕಾರವೇ ಮಸ್ತಿಷ್ಕ ಹಾಗೂ ಮೆದುಳುಬಳ್ಳಿಯದು. ಯಾವುದೇ ಶಿಶುವು ಬೆಳೆದುಕೊಳ್ಳಲೂ ಮೊದಲ ಹೆಜ್ಜೆಯೆಂದರೆ ತಲೆಯೇ ಸರಿ. ಮೊದಮೊದಲು ತಲೆಯೇ ದಪ್ಪನಾಗಿ ದೊಡ್ಡದಾಗಿರುವುದು. ಅಲ್ಲಿಯ ಅಂಶಗಳೇ ಕ್ರಮವಾಗಿ ಇಡೀ ಶರೀರವಾಗಿ ಬೆಳೆದುಕೊಳ್ಳುವುದು. ಸಹಜ ಸಾರೋಗ್ಯ ಹೆರಿಗೆಯೆಂದರೆ ಮೊದಲು ಹೊರಬರುವುದೂ ತಲೆಯೇ ಸರಿ. ಮಗುವು ಜನಿಸಿದ ಮೇಲೂ "ತಲೆ ನಿಲ್ಲುವ ತನಕ" ಮಗುವನ್ನು ಬಹಳ ಎಚ್ಚರಿಕೆಯಿಂದಲೇ ನೋಡಿಕೊಳ್ಳಬೇಕಾಗುತ್ತದೆ.



ಹೀಗೆ ಮೂಲವು ಸ್ಥಿರವಾಗುವ ಪರ್ಯಂತ ಬೇರೆಯ ಬೆಳವಣಿಗೆಗಳು ಮಂದಗತಿಯಿಂದಲೇ ಘಟಿಸುತ್ತವೆ. ಮಿಕ್ಕ ಪ್ರಾಣಿಗಳಲ್ಲೂ ಈ ಅಂಶವು ಸಮಾನವಾಗಿದ್ದರೂ, ಮನುಷ್ಯರಲ್ಲಿ ಇದೊಂದು ವಿಶೇಷವೇ ಸರಿ. ಮಿಕ್ಕ ಪ್ರಾಣಿಗಳು ಹುಟ್ಟಿದ ಕೆಲವೇ ಕ್ಷಣಗಳಲ್ಲೇ ಅವು ಶಿಶುವಿಗಿಂತಲೂ ಹೆಚ್ಚಾಗಿ ಹಾಗೂ ಶೀಘ್ರತರವಾಗಿ ಸ್ವಾವಲಂಬಿಯಾಗಿರುತ್ತವೆ. ಹೀಗೆ ಬುಡವನ್ನು ಗಟ್ಟಿಮಾಡಿಕೊಂಡೇ ಉಳಿದ ಬೆಳವಣಿಗೆಗೆ ಕೈಹಾಕುವುದೆಂಬ ತತ್ತ್ವವನ್ನು ಸಸ್ಯಗಳಲ್ಲೂ ಮನುಷ್ಯರಲ್ಲೂ ನಾವು ಕಾಣಬಲ್ಲೆವು.

ಭಾರತೀಯ ಸಂಸ್ಕೃತಿಯ ಹಿರಿಮೆಯೆಂಬುದು ಋಷಿಗಳಿಂದ ಆದುದೆಂಬುದು ನಿರ್ವಿವಾದವೇ ಸರಿ. ಏಕೆ? ಏಕೆಂದರೆ ಈ ಸಂಸ್ಕೃತಿಯು ಶ್ರೇಷ್ಠಜ್ಞಾನವನ್ನು ಆಧರಿಸಿದುದು. ಶ್ರೇಷ್ಠ ಜ್ಞಾನವೆಂದರೇನು? ಸಾಧಾರಣವಾದ ಜ್ಞಾನವೆಂದರೆ ನಮ್ಮ ಐದು ಇಂದ್ರಿಯಗಳಿಗೆ ಏನೇನು ತಿಳಿಯುತ್ತದೋ ಅಷ್ಟೇ. ಶ್ರೇಷ್ಠ ಜ್ಞಾನವೆಂದರೆ ಸೃಷ್ಟಿಯ ಸೂಕ್ಷ್ಮಗಳನ್ನು ಅರಿಯುವ ಜ್ಞಾನ. ಆಧುನಿಕ ವಿಜ್ಞಾನವೂ ಸೃಷ್ಟಿಯ ಅನೇಕ ಸೂಕ್ಷ್ಮಗಳನ್ನು ಹೊರಗೆಡಹಿದೆಯಷ್ಟೆ. ಆದರೆ ಮತ್ತೂ ಮುಖ್ಯವಾದ ಸೃಷ್ಟಿಯ ಅನೇಕ ಮರ್ಮಗಳನ್ನು ಋಷಿಗಳು ಕಂಡುಕೊಂಡರು.

ಋಷಿಗಳು ಇವನ್ನು ತಮ್ಮ ತಪೋವನಗಳಲ್ಲಿ ತಪಸ್ಸು ಮಾಡಿ ಕಂಡುಕೊಂಡರು. ತಪೋವನಗಳೆಂದರೇನು? ಅವುಗಳು ಮರದ ರಾಶಿಗಳೇ ಸರಿ. ಮರಗಳು ತೋರುವ ಆದರ್ಶವು ಸಾಮಾನ್ಯವೇನಲ್ಲ. ಮೇಲ್ನೋಟಕ್ಕೆ ಗೋಚರವಾಗುವ ಅಂಶವೆಂದರೆ ಮರಗಳ ಪರೋಪಕಾರಪರತೆ.

ಹೀಗೆ ಮರಗಳ ಜೀವನವು ನಮಗೆ ಅಮರಜೀವನಕ್ಕೇ ಆದರ್ಶವಾಗಿದೆಯಲ್ಲವೆ!?

## ಗ್ರೀಷ್ಮ ರಂಗೋತ್ಸವ

**ರಾಜ್ಯದ** ಹವ್ಯಾಸಿ ರಂಗತಂಡಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರಂಗಾಯಣವು ಗ್ರೀಷ್ಮ ರಂಗೋತ್ಸವ ಆರಂಭಿಸಿದ್ದು, ಜೂನ್ 23ರವರೆಗೆ ನಡೆಯಲಿದೆ.

ಇತ್ತೀಚೆಗೆ ನಿಧನರಾದ ರಂಗನಟಿ, ನಿರ್ದೇಶಕಿ ಎಸ್.ಮಾಲತಿ ಅವರಿಗೆ ಈ ರಂಗೋತ್ಸವವನ್ನು ಅರ್ಪಿಸಲಾಗಿದೆ. ರಂಗೋತ್ಸವದಲ್ಲಿ ವಿವಿಧ ನಾಟಕಗಳ ಪ್ರದರ್ಶನವನ್ನು ಹಮ್ಮಿಕೊಂಡಿದ್ದು, ಮೇ 26ರಂದು ಗಿರೀಶ್ ಮಾಚಳ್ಳಿ ನಿರ್ದೇಶನದ ಚಾರ್ವಾಕ ಟ್ರಸ್ಟ್ ತಂಡದವರು ಅಭಿನಯಿಸುವ 'ಬುದ್ಧಯಾನ' ಪ್ರದರ್ಶನವಿದೆ. ಇದು 6 ಗಂಟೆಗಳ ನಾಟಕವಾಗಿದ್ದು, ಎರಡೂವರೆ ಗಂಟೆಗೆ ಸೀಮಿತಗೊಳಿಸಲಾಗಿದೆ. ಜೂನ್ 2ರಂದು ದು.ಸರಸ್ವತಿ ರಚನೆಯ, ದೀಪಕ್ ಶ್ರೀನಿವಾಸನ್ ನಿರ್ದೇಶನದ 'ಸಣ್ತಮ್ಮಿಯ ಲವ್ ಪುರಾಣ' ಹಾಗೂ ವಾಣಿ ಪೆರಿಯೋಡಿ ರಚನೆಯ ದೀಪಕ್ ಶ್ರೀನಿವಾಸನ್ ನಿರ್ದೇಶನದ 'ಕೌದಿ' ಎಂಬ ಏಕವ್ಯಕ್ತಿ ನಾಟಕಗಳು ಪ್ರದರ್ಶನಗೊಳ್ಳಲಿವೆ.

ಜೂನ್ 9ರಂದು ರವೀಂದ್ರನಾಥ ಟ್ಯಾಗೋರ್ ರಚನೆಯ, ಗುರುರಾಜ ಮಾರ್ಪಳ್ಳಿ ನಿರ್ದೇಶನದ ಉಡುಪಿಯ ಸುಮನಸಾ ಕೊಡವೂರು ತಂಡದ ಕಲಾವಿದರು ಅಭಿನಯಿಸುವ 'ರಥಯಾತ್ರೆ', 16ರಂದು ಕುವೆಂಪು ರಚನೆಯ ಪಿಚ್ಚಳ್ಳಿ ಶ್ರೀನಿವಾಸ್ ನಿರ್ದೇಶನದಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಸಾರಂಗ ರಂಗ ತಂಡದ ಕಲಾವಿದರು 'ಜಲಗಾರ' ನಾಟಕವನ್ನು ಪ್ರಸ್ತುತಪಡಿಸಲಿದ್ದಾರೆ.

22ರಂದು ಮಂಡ್ಯದ ಜನದನಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಮಂಜುನಾಥ ಎಲ್. ಬಡಿಗೇರ ನಿರ್ದೇಶನದಲ್ಲಿ ಪ್ರಸನ್ನ ಅವರ ರಚನೆಯ 'ಮಹಿಮಾಪುರ' ಹಾಗೂ 23ರಂದು ತೀರ್ಥಹಳ್ಳಿಯ ನಟ ಮಿತ್ರರು ತಂಡದಿಂದ ಗೋಪಾಲಕೃಷ್ಣ ಪೈ ಅವರ ಕಾದಂಬರಿ 'ಸ್ವಪ್ನ ಸಾರಸ್ವತ' ರಂಗರೂಪ ಪ್ರದರ್ಶನವಿದೆ. ಇದರ ರಂಗರೂಪ ಹಾಗೂ ನಿರ್ದೇಶನವನ್ನು ಎಸ್. ಮಾಲತಿ ಮಾಡಿದ್ದಾರೆ. ಎಲ್ಲ ನಾಟಕಗಳು ಸಂಜೆ 6.30ಕ್ಕೆ ಪ್ರದರ್ಶನಗೊಳ್ಳಲಿವೆ. ಪ್ರತಿ ನಾಟಕಕ್ಕೆ ₹50 ಶುಲ್ಕವಿದೆ.


ರಥಯಾತ್ರೆ

## ಪುಸ್ತಕ ಪರಿಚಯ

**ಪುಸ್ತಕ: ಸಮುದಾಯ ನಾಯಕರು**
**ಲೇಖಕರು: ಅಂಶಿ ಪ್ರಸನ್ನಕುಮಾರ್**
**ಪ್ರಕಾಶಕರು: ರೂಪ ಪ್ರಕಾಶನ**
**ಪುಟಗಳು: 256**
**ಬೆಲೆ: ₹ 300**




ಸ್ವಾತಂತ್ರ್ಯಾ ನಂತರದ ಮೈಸೂರು – ಚಾಮರಾಜನಗರ ಜಿಲ್ಲೆಗಳ ರಾಜಕೀಯ ಇತಿಹಾಸ ದಾಖಲಿಸುವ ಪ್ರಯತ್ನವಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರು ಇದೀಗ ಮತ್ತೊಂದು ಕೃತಿಯನ್ನು ಹೊರತಂದಿದ್ದಾರೆ.

ಅವರ ಮೊದಲ ಪುಸ್ತಕವು, ಈ ಜಿಲ್ಲೆಗಳಲ್ಲಿ ನಡೆದ ಎಲ್ಲ ಚುನಾವಣೆಗಳ ವಿಶ್ಲೇಷಣೆಯನ್ನು ಫಲಿತಾಂಶದೊಂದಿಗೆ ಕ್ಷೇತ್ರವಾರು ಕಟ್ಟಿಕೊಡುತ್ತದೆ. ಆದರೆ, ಅದರ ಮುಂದುವರಿದ ಭಾಗವಾಗಿರುವ 'ಸಮುದಾಯ ನಾಯಕರು' ಕೃತಿಯು ಈ ಜಿಲ್ಲೆಗಳ ರಾಜಕೀಯ ನಾಯಕರನ್ನು ಪರಿಚಯಿಸುತ್ತದೆ.

ಮೈಸೂರು– ಚಾಮರಾಜನಗರ ಭಾಗದಿಂದ ಹತ್ತು ಸಮುದಾಯಗಳಿಂದ ಚುನಾಯಿತರಾದವರ, ಅತಿ ಹೆಚ್ಚು ಅಥವಾ ಕಡಿಮೆ ಬಾರಿ ಆಯ್ಕೆಯಾದವರ ವಿವರ ಈ ಕೃತಿಯಲ್ಲಿವೆ. ಕ್ಷೇತ್ರ ಕುರಿತ ಸ್ವಾರಸ್ಯಗಳಿವೆ. ಕ್ಷೇತ್ರ ದರ್ಶನ ಜತೆಗೆ, ಈಚಿನ ವಿಧಾನಸಭಾ ಚುನಾವಣಾ ಫಲಿತಾಂಶವಿದೆ. ಹೀಗೆ ಸಮಕಾಲೀನ ರಾಜಕೀಯ ಚಿತ್ರಣ ಕಟ್ಟಿಕೊಡುವ ಈ ಕೃತಿ ಗಮನಾರ್ಹ.




**ಪುಸ್ತಕ: ಸಮಾಜಮುಖಿ ಶ್ರೀಸಾಮಾನ್ಯರು**
**ಲೇಖಕರು: ಅಂಶಿ ಪ್ರಸನ್ನಕುಮಾರ್**
**ಪ್ರಕಾಶಕರು: ರೂಪ ಪ್ರಕಾಶನ**
**ಪುಟಗಳು: 172**
**ಬೆಲೆ: ₹ 130**

ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವವರ ಚಿತ್ರಣ ಈ ಕೃತಿಯಲ್ಲಿದೆ. ಶ್ರೀಸಾಮಾನ್ಯರು, ಕಲಾವಿದರು, ಸಾಹಿತಿಗಳು–ಶಿಕ್ಷಕರು–ಅಧಿಕಾರಿಗಳು ಹಾಗೂ ಗಣ್ಯರು ಎಂಬ ನಾಲ್ಕು ವಿಭಾಗಗಳು ಇದರಲ್ಲಿವೆ.

ಶ್ರೀಸಾಮಾನ್ಯರಲ್ಲಿ ಉರಗತಜ್ಞ ಸ್ನೇಕ್ ಶ್ಯಾಮ್, ಪಿಂಚಣಿಯಲ್ಲಿ ಹಳ್ಳಿಗರ ಅಭಿವೃದ್ಧಿಗೆ ನೆರವಾಗುವ ನಿವೃತ್ತ ಎಂಜಿನಿಯರ್ ಪಿ.ಎಸ್.ಚಂದ್ರಣ್ಣ, ಸಾಲು ಮರ ನೆಟ್ಟ ಕೆ.ಆರ್. ಗುರಿಕಾರ್, ಸಮಾರಂಭಗಳಲ್ಲಿ ಉಳಿಯುವ ಆಹಾರವನ್ನು ತೆಗೆದುಕೊಂಡು ಹೋಗಿ ಹಸಿದವರ ಹೊಟ್ಟೆ ತುಂಬಿಸುತ್ತಿರುವ ರಾಜೇಂದ್ರ... ಹೀಗೆ ಸಾಮಾನ್ಯರ ಸಮಾಜಸೇವೆಯನ್ನು ದಾಖಲಿಸಿದ್ದಾರೆ. ಹೀಗೆ ಬೇರೆ ಬೇರೆ ಕ್ಷೇತ್ರಗಳ 67 ಸಾರ್ವಜನಿಕ ನಾಯಕರನ್ನು ಗುರುತಿಸಿರುವ ಪ್ರಸನ್ನಕುಮಾರ್, ಅವರೆಲ್ಲರನ್ನು ಇಲ್ಲಿ ಪರಿಚಯಿಸಿದ್ದಾರೆ.

## ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗಲಿ

**ಜನದನಿ**

ಮೈಸೂರು ನಗರದಲ್ಲಿ ಅಪರಾಧ ಚಟುವಟಿಕೆಗಳ ಪ್ರಮಾಣ ಏರಿಕೆಯಾಗುತ್ತಿದೆ. ಸರಣಿ ಸರಗಳ್ಳತನ ಪ್ರಕರಣಗಳು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿವೆ. ಕಳ್ಳತನ ಪ್ರಕರಣ, ಅವ್ಯವಹಾರಗಳಿಂದ ಪ್ರವಾಸಿಗರಿಗೂ ಅಸುರಕ್ಷತೆಯ ಭಾವ ಮನೆಮಾಡಿದೆ. ಈ ಕುರಿತು ಮೈಸೂರಿಗರು ವ್ಯಕ್ತಪಡಿಸಿರುವ ಅಭಿಪ್ರಾಯ ಇಲ್ಲಿದೆ.

### ಕಠಿಣ ಶಿಕ್ಷೆಗೆ ಒಳಪಡಿಸಿ



ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದ ಶೇ 60ಕ್ಕೂ ಹೆಚ್ಚು ಮಂದಿಗೆ ಶಿಕ್ಷೆಯೇ ಆಗುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಸಾಕ್ಷಿಗಳಿಗೆ ಸೂಕ್ತ ರಕ್ಷಣೆ ಇಲ್ಲದೇ ಇರುವುದು. ಈ ಕಾರಣದಿಂದ ಅಪರಾಧಿಗಳು ಶಿಕ್ಷೆ ಅನುಭವಿಸದೇ ಹೊರಬರುತ್ತಿದ್ದಾರೆ. ಇದರಲ್ಲಿ ಪೊಲೀಸರು, ವಕೀಲರು ಹಾಗೂ ನ್ಯಾಯಾಂಗ ವ್ಯವಸ್ಥೆಯ ಸಮಯವೂ ವ್ಯರ್ಥವಾಗುತ್ತಿದೆ. ಇದು ಬೇಸರದ ವಿಷಯ. ಈ ಬಗ್ಗೆ ಗಮನ ಹರಿಸಿದರೆ ಅಪರಾಧ ಚಟುವಟಿಕೆಗಳಿಗೆ ನಿಯಂತ್ರಣ ಹಾಕಬಹುದು.

**ಮನೋಜ್**, ಟಿ.ಕೆ.ಬಡಾವಣೆ

### ಪುಂಡರ ವಿರುದ್ಧ ಕ್ರಮ ಕೈಗೊಳ್ಳಲಿ



ಹಾದಿ ಬೀದಿಯಲ್ಲಿ, ಪಾರ್ಕ್, ಮೈದಾನಗಳಲ್ಲಿ ಕುಳಿತು ಮದ್ಯಪಾನ ಮಾಡಿ ಪುಂಡಾಟಿಕೆ ಮೆರೆಯುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಪೊಲೀಸರು ಸಾರ್ವಜನಿಕರಂತೆ ನಟಿಸಿ ಸರಗಳ್ಳತನ ಮತ್ತು ಸುಲಿಗೆ ಪ್ರಕರಣಗಳ ಆರೋಪಿಗಳನ್ನು ಪತ್ತೆ ಮಾಡಲು ಶ್ರಮಿಸಬೇಕು. ರಾತ್ರಿ ವೇಳೆಯಲ್ಲಿ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಗಸ್ತು ಬಿಗಿಗೊಳಿಸಿ, ತಡ ರಾತ್ರಿ ಓಡಾಡುವ ಸಾರ್ವಜನಿಕರನ್ನು ಕೂಲಂಕಷವಾಗಿ ವಿಚಾರಣೆಗೊಳಪಡಿಸಬೇಕು.

**ರಾಮಕೃಷ್ಣ**, ಕುವೆಂಪುನಗರ

### ಅಕ್ರಮ ವಾಸಿಗಳನ್ನು ಪತ್ತೆ ಮಾಡಿ



ನಗರದಲ್ಲಿ ಅಕ್ರಮವಾಗಿ ವಾಸವಾಗಿರುವ ವಿದೇಶಿಯರನ್ನು ಪತ್ತೆ ಮಾಡಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ವಿದೇಶಿಗರಿಗೆ ಸಂಬಂಧಿಸಿದಂತೆ ಅವರು ವಿದ್ಯಾಭ್ಯಾಸ ಮಾಡುವ ಮತ್ತು ವಾಸಿಸುವ ಸ್ಥಳಗಳಲ್ಲಿ ಆ ಸಂಸ್ಥೆಗಳ ಮತ್ತು ಮಾಲೀಕರ ಜವಾಬ್ದಾರಿ ಕುರಿತ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದು, ಕಂಡು ಬಂದರೆ ವಿದೇಶಗಳಲ್ಲಿ ಇರುವಂತೆ ಕಠಿಣ ಕ್ರಮ ಕೈಗೊಂಡು ಅವರ ವಿಸಾ ರದ್ದುಪಡಿಸಬೇಕು.

**ಶ್ರೀಧರ,** ಶ್ರೀರಾಂಪುರ

### ಪ್ರವಾಸಿಗರ ಮೇಲೆ ಹಲ್ಲೆ



ಮಹಿಳೆಯರು ಮತ್ತು ಪ್ರೇಮಿಗಳನ್ನೇ ಗುರಿಯಾಗಿಸಿಕೊಂಡು ಅಪರಾಧ ಎಸಗುತ್ತಿದ್ದ ಪುಂಡರು ಇತ್ತೀಚಿನ ದಿನಗಳಲ್ಲಿ ಪ್ರವಾಸಿಗರ ಮೇಲೂ ಹಲ್ಲೆಗೆ ಮುಂದಾಗಿದ್ದಾರೆ. ಇದು ಪ್ರವಾಸೋದ್ಯಮದ ದೃಷ್ಟಿಯಿಂದ, ಸುರಕ್ಷತೆಯ ದೃಷ್ಟಿಯಿಂದ ಖಂಡನೀಯ, ಆತಂಕಕಾರಿ ಬೆಳವಣಿಗೆ. ಈ ರೀತಿ ಆದರೆ ಮೈಸೂರಿಗೆ ಪ್ರವಾಸಿಗರು ಹೇಗೆ ಭೇಟಿ ನೀಡುವುದು? ಇಲ್ಲಿ ಸುರಕ್ಷತೆಯೇ ಇಲ್ಲವೆಂದಾದರೆ ಹೇಗೆ?

**ಗಾಯತ್ರಿ,** ಜಯಲಕ್ಷ್ಮಿಪುರಂ

### ಚುನಾವಣೆ ಬಳಿಕವೇ ಹೆಚ್ಚು



ಲೋಕಸಭೆ ಚುನಾವಣೆ ಘೋಷಣೆಯಾದ ಬಳಿಕವೇ ನಗರದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಏಕಾಏಕಿ ಏರಿಕೆಯಾದವು. ಇದಕ್ಕೆ ಕಾರಣ, ಪೊಲೀಸರ ವರ್ಗಾವಣೆ. ಚುನಾವಣೆ ಸಂದರ್ಭದಲ್ಲಿ ಅಕ್ರಮಗಳು ನಡೆಯಬಾರದು ಎಂದು ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗುತ್ತದೆ. ಆದರೆ, ಇದೇ ಸಂದರ್ಭವನ್ನು ಬಳಸಿಕೊಳ್ಳುವ ದುಷ್ಕರ್ಮಿಗಳು ಅಪರಾಧ ಎಸಗುತ್ತಾರೆ. ಯಾವ ರೀತಿಯ ಕ್ರಮಗಳನ್ನು ಅನುಸರಿಸಬೇಕು ಹಾಗೂ ಕಾರ್ಯಾಚರಣೆ ನಡೆಸಬೇಕು ಎಂದು ಹೊಸ ಅಧಿಕಾರಿಗಳು ನಿರ್ಧರಿಸುವಷ್ಟರಲ್ಲಿ ಕಾಲ ಮಿಂಚಿರುತ್ತದೆ. ಇಂಥ ಸಾಧ್ಯತೆಗಳನ್ನು ಗಮನದಲ್ಲಿ ಇಟ್ಟುಕೊಂಡು ವರ್ಗಾವಣೆ ಮಾಡುವ ಮುನ್ನ ಯೋಚಿಸಬೇಕು.

**ಗುರುರಾಜ್,** ಸಿದ್ಧಾರ್ಥನಗರ

### ಭಯೋತ್ಪಾದಕರೂ ಪ್ರವೇಶಿಸಿದ್ದರು



ಕೆಲವು ವರ್ಷಗಳ ಹಿಂದೆ ನ್ಯಾಯಾಲಯ ಆವರಣದ ಶೌಚಾಲಯದಲ್ಲಿಯೂ ಒಂದು ಸ್ಫೋಟ ನಡೆದಿತ್ತು. ಇದು ಭಯೋತ್ಪಾದಕರ ಕೃತ್ಯ ಎಂದು ಆ ಬಳಿಕ ತಿಳಿದುಬಂದಿತ್ತು. ಅಲ್ಲದೆ, ಕೆಲವು ಭಯೋತ್ಪಾದನಾ ಸಂಘಟನೆಗಳ ಸದಸ್ಯರೂ ಇಲ್ಲಿಗೆ ಬಂದಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ ಮೈಸೂರಿನಲ್ಲಿ ಇನ್ನಷ್ಟು ಭದ್ರತೆ ಹೆಚ್ಚಿಸಬೇಕು. ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಲ್ಲಿ ಕಠಿಣ ತಪಾಸಣೆ ನಡೆಸಬೇಕು.

**ವೀರೇಶ್,** ಪಡುವಾರಹಳ್ಳಿ

### ಸಾರ್ವಜನಿಕರು–ಪೊಲೀಸರ ಮಧ್ಯೆ ಬಾಂಧವ್ಯ ಅಗತ್ಯ



ಪೊಲೀಸರು ಮತ್ತು ಸಾರ್ವಜನಿಕ ಸಂಪರ್ಕ ಸುಲಭವಾಗುವಂಥ ವ್ಯವಸ್ಥೆ ಜಾರಿಯಾಗಬೇಕು. ಅಪರಾಧ ತಡೆ ಮಾಸಾಚರಣೆಯನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ ಪ್ರತಿ ದಿನವೂ ಇಂಥ ವ್ಯವಸ್ಥೆಯನ್ನು ಜಾರಿಗೊಳಿಸಿರಬೇಕು. ರೌಡಿ ಶೀಟರ್‌ಗಳ ಮನೆ ಮೇಲೆ ದಾಳಿ ನಡೆಸಬೇಕು. ಹೋಟೆಲ್ ಮತ್ತು ಲಾಡ್ಜ್‌ಗಳ ದಿಢೀರ್ ತಪಾಸಣೆ ನಡೆಸಬೇಕು.

**ವೆಂಕಟೇಶ್,** ಜಯನಗರ

### ಸಹಕಾರ ಅಗತ್ಯ



ಪೊಲೀಸ್ ಇಲಾಖೆ ಉತ್ತಮ ಸೇವೆ ನೀಡಲು ಸಾರ್ವಜನಿಕರು ಸಹಕಾರ ನೀಡಬೇಕು. ಸಾರ್ವಜನಿಕರು, ಪೊಲೀಸ್ ಇಲಾಖೆ ನಡುವೆ ಉತ್ತಮ ಸಂಪರ್ಕಕೊಂಡಿಯಾಗಿರುವ ರೀತಿ ಕೆಲಸ ಮಾಡಬೇಕು. ಎಲ್ಲದಕ್ಕೂ ಪೊಲೀಸರ ಕಡೆಗೆ ಬೆಟ್ಟು ಮಾಡಿ ತೋರಿಸುವುದಲ್ಲ. ಯಾವುದಾದರೂ ಅಹಿತಕರ ಘಟನೆ ನಡೆಯುತ್ತಿದ್ದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕು. ಎಲ್ಲವೂ ಪೊಲೀಸರಿಗೆ ತಿಳಿದರಲು ಸಾಧ್ಯವಿರುವುದಿಲ್ಲ. ಪೊಲೀಸರಿಗೆ ಮಾಹಿತಿ ನೀಡುವ ಕೆಲಸ ಮಾಡಬೇಕು. ಇದರಿಂದ ಸಮಾಜಕ್ಕೆ ನಾವು ಕೊಡುಗೆ ನೀಡಿದಂತೆಯೂ ಆಗುತ್ತದೆ.

**ವಿಸ್ಮಯಿ,** ಎನ್‌ಆರ್‌.ಮೊಹಲ್ಲಾ

ನಿರೂಪಣೆ: ರೇವಣ್ಣ ಎಂ.

## ನಗೆಹನಿ

**ಮರಿ ಕುರಿದು ಸಾರ್**

**ಪೊಲೀಸ್ :** ಈ ಕುರಿ ಮರಿ ಯಾರದ್ದು?
**ಜೈಲರ್:** ಕುರಿ ಯಾರದ್ದು ಅಂತ ಗೊತ್ತಿಲ್ಲ... ಆದರೆ ಮರಿ ಯಾರುದ್ದು ಅಂತ ಗೊತ್ತು.
**ಪೊಲೀಸ್:** ಮಾರಿ ಯಾರದ್ದು?
**ಜೈಲರ್:** ಮರಿ ಕುರಿದು ಸಾರ್....

**ಭಾನುವಾರ ಬರಬೇಡಪ್ಪ**

**ಟೀಚರ್ :** ಲೇ ಗುಂಡ, ಇವತ್ತು ಯಾಕೊ ಅರ್ಧ ಪ್ಯಾಂಟ್ ಹಾಕ್ಕೊಂಡು ಬಂದಿದ್ದಿಯಾ ?
**ಗುಂಡ :** ಮೇಡಮ್ ಇವತ್ತು ಶನಿವಾರ ಅಲ್ವ ಅರ್ಧ ದಿನ ಮಾತ್ರ ಶಾಲೆ . ಇಡಿ ದಿನ ಇರುವಾಗ ಫುಲ್ ಪ್ಯಾಂಟ್ ಹಾಕ್ಕೊಂಡ್ ಬರ್ತೀನಿ.
**ಟೀಚರ್:** ದಯವಿಟ್ಟು ಭಾನುವಾರ ಮಾತ್ರ ಬರಬೇಡಪ್ಪ



**ಫೇಲಾದೆ ಎಕ್ಸಾಮಿನಲಿ...**

ಶಿವ ಅಂತ ಓದುತ್ತಿದ್ದೆ ಕಾಲೇಜ್‌ನಲ್ಲಿ
ಸಿಕ್ಕಾಪಟ್ಟೆ ಬುಕ್ಸ್ ಇತ್ತು ಬ್ಯಾಗಿನಲ್ಲಿ
ಹುಡುಗಿಯೊಬ್ಬಳು ಸ್ಮೈಲ್ ಕೊಟ್ಟು ಕ್ಲಾಸಿನಲ್ಲಿ
ಫೇಲಾದೆ ಎಕ್ಸಾಮಿನಲಿ...

**ನಮ್ಮ ತಪ್ಪು ನಾವೇ ತಿದ್ದಿಕೊಳ್ಳಬೇಕು**

ಟೀಚರ್: ಯಾಕೋ ಮಾರ್ಕ್ಸ್ ಕಾರ್ಡ್‌ನಲ್ಲಿ ಮಾರ್ಕ್ಸ್ ತಿದ್ದುತ್ತಿದ್ದೀಯಾ
ಗುಂಡ: ನೀವೇ ಹೇಳಿದ್ರಲ್ಲಾ, ನಮ್ಮ ನಮ್ಮ ತಪ್ಪುಗಳನ್ನು ನಾವೇ ತಿದ್ದಿಕೊಳ್ಳಬೇಕು ಅಂತಾ ಅದಕ್ಕೆ .